


International Journal of Kannada Research
www.kannadajournal.com

**ISSN: 2454–5813**
IJKR 2019; 5(4): 77-80
© 2019 IJKR
www.kannadajournal.com
Received: 10-08-2019
Accepted: 12-09-2019

**ಡಾ. ಎಂ. ರಂಗಸ್ವಾಮಿ**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ, ಮದ್ರಾಸು
ವಿಶ್ವವಿದ್ಯಾಲಯ ಮರೀನಾ
ಆವರಣ, ಚೆನ್ನೈ – 05

**Corresponding Author:**
**ಡಾ. ಎಂ. ರಂಗಸ್ವಾಮಿ**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ, ಮದ್ರಾಸು
ವಿಶ್ವವಿದ್ಯಾಲಯ ಮರೀನಾ
ಆವರಣ, ಚೆನ್ನೈ – 05

# ಕನ್ನಡ ಮತ್ತು ತಮಿಳು ಮಹಿಳಾ ಸಣ್ಣ ಕಥೆಗಳಲ್ಲಿ ಸ್ತ್ರೀಸಂವೇದನ

**ಡಾ. ಎಂ. ರಂಗಸ್ವಾಮಿ**

ಸಣ್ಣ ಕಥೆ ಎಂಬ ಪದ ಪ್ರಯೋಗವು ಇಂಗ್ಲೀಷಿನ Short story ಯ ಭಾಷಾಂತರವಾಗಿಯೇ ಕನ್ನಡದಲ್ಲಿ ಪ್ರಚಲಿತವಾಗಿದೆ. Short storyಗೆ ಕೆಲವು ವಿಶೇಷ ಅರ್ಥಗಳನ್ನು ಅನ್ವಯಿಸಿದಾಗ ಸೂಚಿತವಾಗುವ ಅಂಶಗಳೆಂದರೆ, ಸಣ್ಣ ಕತೆ ಸ್ಥಳ, ಕಾಲಗಳನ್ನು ತೀರ ಚಿಕ್ಕ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳುತ್ತದೆ; ಅದು ಅಪೇಕ್ಷಿತ ಅಥವಾ ನಿರೀಕ್ಷಿತ ಮಿತಿಗಳನ್ನು ತಲುಪುವುದಿಲ್ಲ ಹಾಗೂ ಅದು ಹೇಳುವುದು ಬಹಳ ಕಡಿಮೆ ಅಥವಾ ಸ್ವಲ್ಪದರಲ್ಲಿಯೇ ಬಹಳಷ್ಟನ್ನು ಹೇಳುತ್ತದೆ.

ಕಾವ್ಯ ಪ್ರಕಾರಗಳಲ್ಲಿ ಭಾವಗೀತೆಗಿರುವಂತೆ, ಗದ್ಯ ಕಥಾ ಕ್ಷೇತ್ರದಲ್ಲಿ ಸಣ್ಣಕಥೆಗೆ ಒಂದು ಮಹತ್ವದ ಸ್ಥಾನವಿದೆ. ಸಣ್ಣಕತೆಯು ಭಾವಗೀತೆಯಂತೆಯೇ ಮಿತವಾದ ಶಬ್ದದಿಂದ ರಚಿಸಲ್ಪಟ್ಟು ಭಾವ ಪ್ರಾಧಾನ್ಯತೆಯನ್ನು ಅನಾವರಣಗೊಳಿಸಬಲ್ಲ ಒಂದು ಕಲಾಕೃತಿಯೆನಿಸಿಕೊಳ್ಳುತ್ತದೆ. ಕಾದಂಬರಿಯ ವಿಸ್ತಾರ, ಹರಹು, ವಿನ್ಯಾಸ ಇದಕ್ಕಿಲ್ಲವಾದರೂ ಒಂದು ಅಪೂರ್ವ ಚಿತ್ರ ಮನಸ್ಸಿನ ಮೇಲೆ ಮೂಡಿಸಬಲ್ಲ ಪರಿಣಾಮವನ್ನು ಸಣ್ಣಕಥೆಯೊಂದು ತರಬಲ್ಲದು. ಪಾಶ್ಚಾತ್ಯ ಸಾಹಿತ್ಯ ಪ್ರಭಾವದಿಂದ, ತಲೆದೂರಿದ ಈ ಆಧುನಿಕ ಸಾಹಿತ್ಯ ಮಾಧ್ಯಮವು ಭಾರತದ ಭಾಷೆಗಳಲ್ಲಿ ಹೆಚ್ಚು ಕಮ್ಮಿ ಒಂದು ಪರಿಪೂರ್ಣ ಸಾಹಿತ್ಯ ಮಾಧ್ಯಮವಾಗಿ ಬೆಳೆದದ್ದು, ಇತ್ತೀಚಿನ ದಶಕಗಳಲ್ಲಿಯೇ ಎಂದು ಹೇಳಬಹುದು.

ಪ್ರಮುಖ ಅಭಿವ್ಯಕ್ತಿಯ ಮಾಧ್ಯಮವಾದ ಸಾಹಿತ್ಯದಲ್ಲಿ ಸತ್ವಪೂರ್ಣವಾದ ಹಾಗೆಯೇ ಶೀಘ್ರಗತಿಯಲ್ಲಿ, ಸರಳವಾಗಿ, ಓದುಗರ ಮನಮುಟ್ಟುವಲ್ಲಿ ಯಶಸ್ವಿಯಾಗುವ ಸಾಹಿತ್ಯರೂಪ ಕಥಾ ಸಾಹಿತ್ಯವಾಗಿದೆ. ಕಥೆಗಳು ಸಾಮಾಜಿಕ ಪರಿಸ್ಥಿತಿಯನ್ನು ತಿಳಿದುಕೊಳ್ಳುವುದಕ್ಕೂ ಮಾನವನ ಬದುಕನ್ನು ಅರಿತು ಉತ್ತಮಗೊಳಿಸುವುದಕ್ಕೂ ಒಳ್ಳೆಯ ಸಾಧನವಾಗುತ್ತದೆ. ಈ ಕಥಾ ಸಾಹಿತ್ಯದಲ್ಲಿ ಶಕ್ತಿಯುತವಾದವು ಜಾನಪದ ಕಥೆಗಳು, ಕಾದಂಬರಿಗಳು ಮತ್ತು ಸಣ್ಣ ಕಥೆಗಳು. ಇವುಗಳಲ್ಲಿ ಸಣ್ಣ ಕಥೆಗಳು ಸಮಾಜದಲ್ಲಿ ಕಂಡುಬರುವ ನಿರ್ದಿಷ್ಟ ಸಮಸ್ಯೆಗಳನ್ನೂ ಆ ಸಮಸ್ಯೆಗಳನ್ನು ಪರಿಹರಿಸುವ ಮಾರ್ಗಗಳನ್ನೂ ಚಿತ್ರಿಸುವುದಕ್ಕೆ ಒಂದು ಉತ್ತಮ ಸಾಧನವಾಗಿ ಉಪಯೋಗವಾಗುತ್ತದೆ.

ಕಾದಂಬರಿ ಮತ್ತಿತರ ಸಾಹಿತ್ಯ ಪ್ರಕಾರಗಳಿಗಿಂತ ಸಣ್ಣ ಕಥೆಗಳಿಗೆ ಹೆಚ್ಚು ಓದುಗರೂ ಇದ್ದಾರೆ. ಇಂದಿನ ಗಡಿಬಿಡಿಯ ಯುಗದಲ್ಲಿ ಜನರಿಗೆ ಕಾದಂಬರಿಯನ್ನು ಓದುವಷ್ಟು ಸಹನೆ ಇಲ್ಲದಿದ್ದರೂ ಸಣ್ಣ ಕಥೆಗಳನ್ನು ಓದುವ ಹವ್ಯಾಸ ಉಳಿಸಿಕೊಂಡಿದ್ದಾರೆ ಎನ್ನಬಹುದು. ಒಂದು ಚಿಕ್ಕ ಘಟನೆಯ ಒಂದು ಎಳೆಯೇ ಸಣ್ಣಕಥೆಗೆ ಆಧಾರವಾಗಬಹುದು. ಆದರೂ ಕಾವ್ಯದಂತೆ ಇಡೀ ಬದುಕನ್ನೇ ಸಣ್ಣಕಥೆಯಲ್ಲಿ ತೆರೆದಿಡುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ.

ಸಾಹಿತಿ ಸಮಾಜದಲ್ಲಿ ತಾನು ಕಂಡ, ಅನುಭವಿಸಿದ, ಕೇಳಿದ ಘಟನೆಗಳನ್ನು ಸಣ್ಣಕಥೆಗಳಲ್ಲಿ ದಾಖಲಿಸುತ್ತಾನೆ. ಹೀಗೆ ದಾಖಲಾದ ಮನುಷ್ಯನ ಬದುಕಿನ ಘಟನೆಗಳಲ್ಲಿ ಪುರುಷರ ಮತ್ತು ಸ್ತ್ರೀಯರ ಸಮಸ್ಯೆಗಳನ್ನು ನೋಡಬಹುದು. ಇಂಥ ಸಣ್ಣ ಕಥಾ ಪ್ರಕಾರದಲ್ಲಿ ಮಹಿಳೆಯರ ಶೋಷಣೆಯ ವಿವಿಧ ಮುಖಗಳನ್ನು ದಾಖಲಿಸುವುದು ಸುಲಭ. ಹೀಗಾಗಿ ಬಹುಪಾಲು ಲೇಖಕಿಯರು ಸಣ್ಣ ಕಥೆಗಳನ್ನೇ ತಮ್ಮ ಅಭಿವ್ಯಕ್ತಿ ಮಾಧ್ಯಮಗಳನ್ನಾಗಿ ಆಯ್ದುಕೊಂಡಿದ್ದಾರೆ. ಅವುಗಳಲ್ಲಿ ಮಹಿಳಾ ಶೋಷಣೆಗಳನ್ನೂ ಮಹಿಳಾವಿಮೋಚನೆಗಳನ್ನೂ ಕುರಿತು ಪ್ರಕಟಿಸಿದ್ದಾರೆ.

ಮಹಿಳೆಯರೆಲ್ಲರೂ ಕಥೆ ಬರೆಯುವುದರ ಮೂಲಕ ಸಾಹಿತ್ಯಲೋಕವನ್ನು ಪ್ರವೇಶಿಸಿದರು ಎನ್ನಬಹುದು. ಮಹಿಳೆಯರನ್ನು ಕುರಿತ ಮೌಲ್ಯಗಳನ್ನು ಪ್ರಶ್ನಿಸುವುದು, ಹೊಸ ಮೌಲ್ಯಗಳನ್ನು ಪ್ರತಿಪಾದಿಸುವುದು, ಮಹಿಳೆಯರ ಸಮಸ್ಯೆಗಳನ್ನು ಅಭಿವ್ಯಕ್ತಪಡಿಸುವುದು ಇತ್ಯಾದಿ ವಿಷಯಗಳನ್ನು ಅವರ ರಚನೆಗಳಲ್ಲಿ ಕಾಣಬಹುದು.

ಕನ್ನಡದಲ್ಲಿ ಮತ್ತು ತಮಿಳಿನಲ್ಲಿ ಮಹಿಳೆಯರು ರಚಿಸಿರುವ ಸಣ್ಣ ಕಥೆಯ ವ್ಯಾಪ್ತಿ ಬಹಳ
ವಿಸ್ತಾರವಾದದ್ದು. ಈ ಎರಡು ಭಾಷೆಗಳಲ್ಲೂ ಅನೇಕರು ಕಥೆಗಳನ್ನು ಬರೆಯುತ್ತಿದ್ದಾರೆ. ಎಪ್ಪತ್ತರ ದಶಕದ ದಲಿತ–ಬಂಡಾಯ ಚಳವಳಿಗಳ ಪ್ರಭಾವದಿಂದ, ಮಹಿಳೆಯರು ಎಚ್ಚೆತ್ತು ಎಂಬತ್ತರ ದಶಕದಲ್ಲಿ ಬಂಡಾಯ ಪ್ರಜ್ಞೆಯಿಂದ, ಸ್ತ್ರೀವಾದಿ ಎಚ್ಚರದಿಂದ ಕಥೆಗಳನ್ನು ಬರೆಯತೊಡಗಿದರು. ಕನ್ನಡದಲ್ಲಿ ವೀಣಾಶಾಂತೇಶ್ವರ, ಬಿ.ಟಿ.ಲಲಿತಾನಾಯಕ್, ಸಾರಾ ಅಬೂಬಕರ್, ಬಾನು ಮುಷ್ತಾಕ್, ವೈದೇಹಿ, ಗಂಗಾಪಾದೇಕಲ್, ಗೀತಾ ನಾಗಭೂಷಣ, ನೇಮಿಚಂದ್ರ, ಡಾ. ಸಂಧ್ಯಾರೆಡ್ಡಿ, ಡಾ. ಎಂ.ಎಸ್.ವೇದಾ ಮುಂತಾದವರು ಹಲವು ಕಥಾ ಸಂಕಲನಗಳನ್ನು ಪ್ರಕಟಿಸಿ ಕಥೆಗಳ ಮೂಲ, ಕೌಟುಂಬಿಕ, ಆರ್ಥಿಕ, ಸಾಮಾಜಿಕ ವಲಯಗಳಲ್ಲಿ ಸ್ಥಿರವಾಗಿದ್ದ ಕೆಲವು ಮೌಲ್ಯ, ನಂಬಿಕೆಗಳನ್ನು ಪ್ರಶ್ನಿಸತೊಡಗಿದರು. ಹಾಗೆಯೇ ತಮಿಳಿನಲ್ಲಿ ರಾಜಮ್ ಕೃಷ್ಣನ್, ಅಂಬೈ, ಕೋಮಗಳ್, ಕುಯಿಲಿ ರಾಜೇಶ್ವರಿ, ಉಷಾ ಸುಬ್ರಮಣಿಯನ್, ಶಿವಶಂಕರಿ, ಇಂದುಮತಿ, ಲಕ್ಷ್ಮೀ, ವಾಸಂತಿ, ಅನುರಾಧ ರಮಣನ್, ಜೋರ್ತಿಲತಾ, ಗಿರಿಜಾ, ಆರ್.ಚೂಡಾಮಣಿ, ಕಾವೇರಿ, ಶಿವಗಾಮಿ, ತಿಲಕವತಿ, ಮೊದಲಾದವರು ಮಹಿಳಾ ಸಮಸ್ಯೆಗಳನ್ನು ಕಥೆಗಳಲ್ಲಿ ಗಂಭೀರವಾಗಿ ದಾಖಲಿಸಿದ್ದಾರೆ. ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಪ್ರತಿಭಟನೆಯ ದನಿ ಮೂಡಿಸಿದ್ದಾರೆ. ಕನ್ನಡ ಮತ್ತು ತಮಿಳಿನಲ್ಲಿ ಲೇಖಕಿಯರು ವಿಫುಲವಾಗಿ ಕಥೆಗಳನ್ನು ಬರೆಯಲು ಅವರಿಗಿದ್ದ ಸಾಹಿತ್ಯದ ಗಂಭೀರ ಓದುವಿಕೆ, ಸಾಹಿತ್ಯ ಚಳವಳಿಗಳ ಪ್ರೇರಣೆ, ಆರ್ಥಿಕ ಹಾಗೂ ಶೈಕ್ಷಣಿಕ ರಂಗಗಳಲ್ಲಿನ ಸ್ವಾತಂತ್ರ್ಯಗಳು ಮುಖ್ಯ ಕಾರಣ.

೧೯೭೫ರ ತುರ್ತು ಪರಿಸ್ಥಿತಿಯಲ್ಲಿ ಮಹಿಳಾ ಬರೆವಣಿಗೆ ವಿಮರ್ಶಾತ್ಮಕ ರೂಪದಲ್ಲಿ ಹೊರಬಂದಿತ್ತು. ಮಹಿಳೆಯರ ಸಣ್ಣಕಥೆಗಳು ಜನಪ್ರಿಯತೆಯನ್ನು ಪಡೆದುಕೊಂಡವು. ಇದೇ ಸಂದರ್ಭದಲ್ಲಿ ಪಾಶ್ಚಾತ್ಯರಲ್ಲಿ ಮಹಿಳಾ ದೌರ್ಜನ್ಯ, ಲೈಂಗಿಕ ಕಿರುಕುಳ, ಸ್ತ್ರೀಯರ ಶೋಷಣೆ ಕುರಿತು ಚಿಂತನೆಗಳು, ಪ್ರತಿಭಟನೆಗಳು ನಡೆದವು. ಇದರಿಂದ ಕರ್ನಾಟಕ ಮತ್ತು ತಮಿಳುನಾಡುಗಳನ್ನು ಒಳಗೊಂಡಂತೆ ಭಾರತದಲ್ಲೂ ಸಾಹಿತ್ಯ ವಲಯದಲ್ಲಿ ಹೊಸ ಅಲೆ ಮೂಡಿತು. ಅಲ್ಲಿಯ ಪ್ರಭಾವ, ಪ್ರೇರಣೆಗಳು ಭಾರತೀಯ ಲೇಖಕಿಯರ ಮೇಲೆ ಉಂಟಾದವು. ಸ್ತ್ರೀ ಶಿಕ್ಷಣ, ಉದ್ಯೋಗ, ವರದಕ್ಷಿಣೆ ಸಮಸ್ಯೆ, ಉದ್ಯೋಗಸ್ಥ ಮಹಿಳೆಯರ ಮೇಲಿನ ದೌರ್ಜನ್ಯಗಳು, ಅತ್ಯಾಚಾರಗಳನ್ನು ಕುರಿತಂತೆ ಅನೇಕ ಮಹಿಳಾ ಸಂಘಟನೆಗಳು ವಿಚಾರ ಸಂಕಿರಣಗಳನ್ನು ನಡೆಸಿದವು. ಈ ನಿಟ್ಟಿನಲ್ಲಿ ಕನ್ನಡ ಮತ್ತು ತಮಿಳು ಭಾಷೆಗಳ ಸಾಹಿತ್ಯದಲ್ಲಿ ೧೯೭೫ರ ಅನಂತರದಲ್ಲಿ ಆದ ಸ್ತ್ರೀ ಸಂವೇದನೆಯ ಅಭಿವ್ಯಕ್ತಿಗಳು ಹಾಗೂ ಸ್ತ್ರೀವಾದಿ ಪ್ರಜ್ಞಾಪೂರ್ವಕ ಚಿಂತನೆಗಳು ಮಹಿಳೆಯರು ಸಣ್ಣ ಕಥೆಗಳನ್ನು ರಚಿಸಲಿಕ್ಕೆ ಪ್ರೇರಣೆಯಾದವು.

ಈ ನಿಟ್ಟಿನಲ್ಲಿ ಕೆಲವು ಪ್ರಮುಖ ಕನ್ನಡ ಮತ್ತು ತಮಿಳು ಮಹಿಳಾ ಸಣ್ಣ ಕಥೆಗಳನ್ನು ಇಲ್ಲಿ ತೌಲನಿಕ ಪರಿಶೀಲನೆಗೆ ಒಳಪಡಿಸಲಾಗಿದೆ. ಇದಕ್ಕಾಗಿ ಕನ್ನಡದಲ್ಲಿ ವೈದೇಹಿ, ಗಂಗಾಪಾದೇಕಲ್, ಸಾರಾ ಅಬೂಬಕರ್ ಇವರ ಸಣ್ಣಕತೆಗಳನ್ನೂ ತಮಿಳಿನಲ್ಲಿ ಅಂಬೈ, ರಾಜಮ್ ಕೃಷ್ಣನ್, ಆರ್. ಚೂಡಾಮಣಿ ಇವರ ಕಥೆಗಳನ್ನೂ ಪ್ರಾತಿನಿಧಿಕವಾಗಿ ಆರಿಸಿಕೊಳ್ಳಲಾಗಿದೆ.

ಕುಟುಂಬದಲ್ಲಿ ಅಡುಗೆಮನೆಯ ಚಾಕರಿ, ತೊಟ್ಟಿಲು ತೂಗಾಟ, ಹಸೆ, ಕಸೂತಿ ಇಂತಹ ಕೈಂಕರ್ಯಗಳಲ್ಲಿಯೇ ಕರಗಿ ಹೋಗುವ ಮಹಿಳೆಯ ನಿಜವಾದ ಅವಶ್ಯಕತೆ, ಆಸೆ ಆಕಾಂಕ್ಷೆಗಳೇನು ಮಹಿಳೆ ಇಂಥ ಕೌಟುಂಬಿಕ ಬಂಧನದಲ್ಲಿ ಸಿಲುಕದಿದ್ದರೆ, ಅವಳ ಸಾಧನೆಗಳೇನು ಎಂಬ ಪ್ರಶ್ನೆಗಳ ಹಿನ್ನೆಲೆಯಲ್ಲಿ ವೈದೇಹಿ ಅವರ 'ಶೋಧ' ಮತ್ತು ತಮಿಳಿನ ಅಂಬೈ ಅವರ 'ವೀಟಿನ್ ಮೂಲೈಯಿಲ್ ಒರು ಸಮ್ಮೈಯಲಱೈ(ಮನೆಯ ಮೂಲೆಯಲೊಂದು ಅಡಿಗೆ ಕೋಣೆ)' ಕಥೆಗಳ ನಾಯಕಿಯರ ಬದುಕನ್ನು ಉದಾಹರಣೆಯಾಗಿ ಇಲ್ಲಿ ಚರ್ಚಿಸಬಹುದು.

ವೈದೇಹಿ ಅವರ ಶೋಧ ಕಥಾನಾಯಕಿಯ ಬಾಲ್ಯದ ಗೆಳತಿ ಶ್ರೀಮಂತ ಮನೆತನಕ್ಕೆ ಸೊಸೆಯಾಗಿ ಹೋಗುತ್ತಾಳೆ. ಗೆಳತಿ ಅರಮನೆಯಂಥ ಮನೆಯಲ್ಲಿ ರಾಜಕುಮಾರಿಯ ವೈಭವದಲ್ಲಿ ತಾನೆಷ್ಟು ಸುಖಿ ಎಂದು ನಾಯಕಿಗೆ ಹೇಳಿಕೊಳ್ಳುವ ಅವಳು, ಅಡುಗೆ ಮನೆಗೆ ತೆರಳಿದವಳು ಮತ್ತೆ ಬರುವುದೇ ಇಲ್ಲ. "ಒಮ್ಮೆ ದೊಡ್ಡಮನೆ ಹೊಕ್ಕು ಬಾಗಿಲು ಹಾಕಿಕೊಂಡ ಮೇಲೆ ಮತ್ತೆ ಪ್ರತ್ಯಕ್ಷವಾಗಲು ಅವರಿಗೆ ಅವರದೇ ಆದ ಪ್ರಪಂಚಗಳಿರುತ್ತವೆ. ಇದ್ದ ಒಂದು ಪ್ರಪಂಚ ಎಷ್ಟು ಬೇಗ ಮಡಿಕೆ ಮಡಚಿ ಚಿಕ್ಕದಾಗಿ ಹಲವುಗಳಾಗಿ ಬಿಡುತ್ತದೆ. ತನ್ನ ಗೆಳತಿ ಈ ಮಡಕೆಗಳಡಿ ಸಿಕ್ಕಿ ಬಿದ್ದು ಉಸಿರುಗಟ್ಟಿದರೂ ಹೀಗೆ ಉಸಿರುಗಟ್ಟಿಕೊಂಡಿರುವುದೇ ಸುಖವೆಂದು ಮೆತ್ತನೆಯ ಹಾಸಿಗೆಯ ಮೇಲೆ ತಾಂಬೂಲ ಜಗಿಯುತ್ತಾ ಕುಳಿತ್ತಿರಲಿಕ್ಕಿಲ್ಲವಷ್ಟೆ?"(ವೈದೇಹಿ ೧೯೯೧ : ೬೨) ಎಂದು ತನ್ನ ಗೆಳತಿಯ ಬಗ್ಗೆ ನಿರೂಪಕಿ ಹೀಗೆ ಅಭಿಪ್ರಾಯಪಡುತ್ತಾಳೆ.

ಹಲವಾರು ವರ್ಷಗಳ ಅನಂತರ ನಿರೂಪಕಿ ಅದೇ ಗೆಳತಿಯನ್ನು ನೋಡಲು ಹೋದಾಗ ಸುಕ್ಕುಗಟ್ಟಿದ ಮುಖದ ಎದುರಾಗಿ ಆಕೆಯೇ ತಾನು ಶೋಧಿಸುತ್ತಿರುವ ಗೆಳತಿ ಎಂಬುದು ಹೊಳೆಯುತ್ತದೆ. ಭ್ರಮನಿರಸನಗೊಂಡ ನಿರೂಪಕಿಗೆ ಎದುರಾಗುವವಳು ಹುಚ್ಚಿಯಾದ ಈ ಮುದುಕಿ, ನಾಲ್ಕು ಗೋಡೆಯೊಳಗೆ ಬಂಧಿಸಿ ಇಡಲಾದ ಅವಳ ದೇಹ ವಯಸ್ಸಿಗಿಂತ ಮುಂಚೆ ಮುಪ್ಪಾಗಲು ಅವಳ ಅಂತರಂಗಿಕ ತೊಯ್ದಾಟವೇ ಕಾರಣವಾಗಿ ಅವಳನ್ನು ಮಾನಸಿಕ ವಿಲಕ್ಷಣತೆಗೆ ಗುರಿ ಮಾಡಿದೆ. ಕುಟುಂಬ, ತಾಯ್ತನ, ಅಡುಗೆಮನೆ ಇವೇ ತಮ್ಮ ಸಾರ್ಥಕಗಳೆಂದು ಹೊರಗಿನ ಬೆಳಕೇ ಕಾಣದ ಮಹಿಳೆಯರ ನಾಲ್ಕು ಗೋಡೆಯೊಳಗಿನ ಸುಖವೇ ಅಂತಿಮವೆಂದು ಭ್ರಮಾಧೀನ ಸ್ಥಿತಿಯನ್ನು ಕಥೆ ಬಹಳ ಪರಿಣಾಮಕಾರಿಯಾಗಿ ವ್ಯಕ್ತಪಡಿಸುತ್ತದೆ.

ಅಂಬೈ ಅವರ 'ವೀಟಿನ್ ಮೂಲೈಯಿಲ್ ಒರು ಸಮ್ಮೈಯಲಱೈ' ಕಥೆಯಲ್ಲಿ ಇಬ್ಬರು ಸ್ನೇಹಿತೆಯರು ಭಾರತೀಯ ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆ ತುಸು ಬಿಡುವಿಲ್ಲದೆ, ಸ್ವಾತಂತ್ರ್ಯವಿಲ್ಲದೆ ಹೇಗೆ ಶಥಿಲಗೊಳ್ಳುತ್ತಾಳೆ ಎಂಬುದನ್ನು ಸಂಭಾಷಣೆಯ ಮೂಲಕ ವ್ಯಕ್ತಪಡಿಸುತ್ತಾರೆ. "ಪ್ರತಿದಿನ ಮುನ್ನೂರು ಚಪಾತಿಗಳನ್ನು ಮಾಡುವ ಕೆಲಸವೂ ಹದಿನಾಲ್ಕು ಮಕ್ಕಳನ್ನು ಹಡೆದ ಹೊಟ್ಟೆಯೂ ಇಲ್ಲದಿದ್ದರೆ; ಮಟನ್ ಪಲಾವ್, ಮಸಾಲ, ಪೂರಿ, ಧನಿಯಪುಡಿ, ಉಪ್ಪು, ಸಕ್ಕರೆ, ಹಾಲು ಬೆಣ್ಣೆ, ತುಪ್ಪ ಎಂದು ಯೋಚಿಸದೆ ಇದ್ದಿದ್ದರೆ; ನಾಲ್ಕು ದಿನಗಳಿಗೊಮ್ಮೆ ಸ್ಟೌವ್ ಬತ್ತಿಯನ್ನು ಎಳೆದುಬಿಡಬೇಕು; ಸೀಮೆಎಣ್ಣೆ ದೊರಕುವಾಗ ಖರೀದಿಸಬೇಕು; ಮಳೆಗಾಲದಲ್ಲಿ ಅಕ್ಕಿ, ಬೇಳೆಗಳಲ್ಲಿ ಹುಳ ಬೀಳಬಹುದೆಂಬ ಕಳವಳ; ಮಾವು ಕಾಲದಲ್ಲಿ ಉಪ್ಪಿನಕಾಯಿ; ಬೇಸಿಗೆ ಕಾಲದಲ್ಲಿ ಹಪ್ಪಳ; ಹಣ್ಣುಗಳು ಬರುವ ಕಾಲಕ್ಕೆ ತಕ್ಕಂತೆ ಷರಬತ್, ಜ್ಯೂಸ್, ಜಾಮ್; ಹಳೆಯ ಬಟ್ಟೆಗಳನ್ನು ಕೊಟ್ಟು ಪಾತ್ರೆಗಳ ಖರೀದಿ; ಅಡುಗೆ ಕೋಣೆಗೆ ಎರಡು ವಾರಗಳಿಗೊಮ್ಮೆ ಸುಣ್ಣ ಬಳಿಯುವುದು; ತಿಂಗಳ ಮುಟ್ಟು ತಡವಾಯಿತೆಂಬ ಕಳವಳ; ಆಗದಿದ್ದರೆ ಇನ್ನೂ ಕಳವಳ–ಹೀಗೆ ತಲೆಯೊಳಗೆ ಹುಳ, ಉಪ್ಪಿನಕಾಯಿ, ಸುಣ್ಣ ಇವೆಲ್ಲ ತುಂಬಿರದಿದ್ದರೆ, ಒಂದು ವೇಳೆ ನೀವು ಕೆಳಗೆ ಬಿದ್ದ ಆ ಸೇಬನ್ನು ನೋಡಿರಬಹುದಾಗಿತ್ತು; ನೀರಿನ ಆವಿಯನ್ನು ನೋಡಿರಬಹುದಿತ್ತು; ಹೊಸ ಖಂಡಗಳನ್ನು ಕಂಡು ಹಿಡಿಯಬಹುದಾಗಿತ್ತು; ಕೈಲಾಸ ಪರ್ವತದಲ್ಲಿ ಕುಳಿತು ಕಾವ್ಯ ರಚಿಸಬಹುದಾಗಿತ್ತು; ಗುಹೆಯೊಳಗೆ ಚಿತ್ರ ಬರೆಯಬಹುದಿತ್ತು; ಹಾರಬಹುದಿತ್ತು; ಹೋರಾಟಗಳು, ಸೆರೆಮನೆಗಳು, ನೇಣುಗಂಬಗಳು, ರಾಸಾಯನಿಕ ಯುದ್ಧಗಳಿಲ್ಲದ ಪ್ರಪಂಚವನ್ನು ರೂಪಿಸಬಹುದಿತ್ತು"(ಅಂಬೈ ೧೯೯೫ : ೫೦). ಈ ರೀತಿ

ವ್ಯತ್ಯಾಸವಾಗಿ ಚಿಂತಿಸುವುದು ಅಂಬೈ ಅವರ ಪ್ರತ್ಯೇಕ ವಿಶೇಷತೆಯಾಗಿದೆ. ಕುಟುಂಬದ ಪ್ರತಿಯೊಂದು ಹಂತದಲ್ಲೂ ಮಹಿಳೆಗೆ ವಿಶ್ರಾಂತಿ ಇಲ್ಲದೆ ನಿರಂತರವಾಗಿ ಆಕೆ ದುಡಿಯಬೇಕಾಗಿದೆ. ಮಹಿಳೆ ವೈಯಕ್ತಿಕ ಸ್ವಾತಂತ್ರ್ಯವನ್ನು ಬದಿಗೊತ್ತಿ ತನ್ನ ಪ್ರತಿಭೆ ಸಾಮರ್ಥ್ಯಗಳನ್ನು ಅಡಿಗೆ ಮನೆಯೊಳಗೆ ಬೂದಿಯಾಗಿಸಿ ಜೀವನಪೂರ್ತಿ ಕೂಪ ಮಂಡೂಕದಂತೆ ಬದುಕಬೇಕಾದ ನೆಲೆಯನ್ನು ಕಥೆಗಾರ್ತಿ ತನ್ನದೇ ಧಾಟಿಯಲ್ಲಿ ಪ್ರತಿಪಾದಿಸಿದ್ದದಾರೆ.

ಮಹಿಳೆ ಕುಟುಂಬವೆಂಬ ಸಾಮಾಜಿಕ ಸಂಸ್ಥೆಯಲ್ಲಿ ತನ್ನ ಬೌದ್ಧಿಕ ವಿಕಾಸದ ಅನಿವಾರ್ಯತೆಗಳನ್ನು ಹತ್ತಿಕ್ಕಿ ಜೀವಿಸುವ ನೆಲೆಯನ್ನು ಈ ರಚನೆಗಳೆರಡರಲ್ಲೂ ಕಾಣಬಹುದು. ಮಹಿಳೆಯರನ್ನು ಅನಾದಿ ಕಾಲದಿಂದಲೂ ಕೌಟುಂಬಿಕ ಚೌಕಟ್ಟಿನೊಳಗೆ ಬಂಧಿಸಿ, ಅವರ ಆದರ್ಶದ ಕನಸುಗಳನ್ನು ಭಗ್ನಗೊಳಿಸಿ ಅವರನ್ನು ಜರ್ಝರಿತವಾಗಿ ಮಾಡುವ ವ್ಯವಸ್ಥೆಯನ್ನು ವೈದೇಹಿಯವರು ಬಯಲಿಗೆಳೆದಿದ್ದಾರೆ. ಇದೇ ರೀತಿ ಅಂಬೈ ಅವರು, ಮಹಿಳೆಯರು ಎಲ್ಲ ವಲಯಗಳಲ್ಲೂ ಪುರುಷನಷ್ಟೇ ಸಕ್ರಿಯವಾಗಿ ಕಾರ್ಯವೈಖರಿಯನ್ನು ನಿರ್ವಹಿಸಲು ಸಮರ್ಥರಾಗಿದ್ದಾರೆ. ಇಂಥ ಸಾಮರ್ಥ್ಯ, ಕ್ರಿಯಾಶೀಲತೆಗಳನ್ನು ಹೊಂದಿದ್ದ ಅವರು ಅಡುಗೆ ಮನೆಯ ಸಿಂಕಿನಲ್ಲಿ ತಮ್ಮ ವ್ಯಕ್ತಿತ್ವದ ಪ್ರತಿಭೆಗಳನ್ನು ನಾಶಗೊಳಿಸಿಕೊಳ್ಳಬೇಕಾದ ಪರಿಸ್ಥಿತಿಯನ್ನು ಮನದಟ್ಟು ಮಾಡಿಕೊಟ್ಟಿದ್ದಾರೆ. ಈ ಕಥೆಗಳೆರಡು ಕೌಟುಂಬಿಕ ನೆಲೆಯಲ್ಲಿ ಮಹಿಳೆಯ ಸ್ಥಿತಿಯನ್ನು, ಸ್ಥಾನಮಾನಗಳನ್ನು ಕಾಣಿಸಲು ಪ್ರಯತ್ನಿಸುತ್ತವೆ. ಹೆಣ್ಣು ಪರಂಪರಾಗತವಾಗಿ ಮನೆಯ ನಾಲ್ಕು ಗೋಡೆಗಳ ನಡುವೆ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸುತ್ತ ಗಂಡ ಕೊಟ್ಟ ಅಧಿಕಾರವನ್ನೇ ತನ್ನದೆಂದು ಭಾವಿಸುತ್ತ ಬೌದ್ಧಿಕ ಚಿಂತನೆ, ಸಾಧನೆಗಳಿಂದ ವಂಚಿತಳಾಗುವುದನ್ನು ಕಥೆಗಾರ್ತಿಯರಿಬ್ಬರೂ ಮನಮುಟ್ಟುವಂತೆ ಚಿತ್ರಿಸಿದ್ದಾರೆ.

ವಿವಾಹಿತ ಮಹಿಳೆಯರು ಸಂತೋಷವಾಗಿ, ಸಮಾಧಾನವಾಗಿ ಜೀವಿಸಲು ಸಾಧ್ಯವಾಗುತ್ತಿಲ್ಲ. ವರದಕ್ಷಿಣೆ ಸಮಾನವಾಗಿ ಸಂದಾಯವಾಗಲಿಲ್ಲ; ಅತ್ತೆ, ಮಾವ, ಗಂಡ, ನಾದಿನಿಯರೊಂದಿಗೆ ಹೊಂದಿಕೊಂಡು ಬದುಕುತ್ತಿಲ್ಲ ಎಂಬ ಕಾರಣಗಳಿಂದ ಬಹುಪಾಲು ಮಹಿಳೆಯರ ವೈವಾಹಿಕ ಬದುಕು ಮೂರಾಬಟ್ಟೆಯಾಗುತ್ತದೆ. ಆರ್. ಚೂಡಾಮಣಿಯವರ 'ಕಿಣರು(ಬಾವಿ)' ಕಥೆಯ ಪರಿಮಳ ಬದುಕು ಆದದ್ದು ಹೀಗೆಯೇ. ವರದಕ್ಷಿಣೆ ಸರಿಯಾಗಿ ಸಂದಾಯವಾಗಲಿಲ್ಲ ಎಂಬ ಕಾರಣದಿಂದ ಅವಳ ಅತ್ತೆ, ಗಂಡ ಇಬ್ಬರೂ ಅವಳನ್ನು ತವರು ಮನೆಗೆ ಕಳುಹಿಸುತ್ತಾರೆ. ಆಕೆಯ ತಂದೆ ಮೊದಲೇ ಮದುವೆಗೆ ಮಾಡಿದ್ದ ಸಾಲವನ್ನು ತೀರಿಸಲಾರದ ಸ್ಥಿತಿಯಲ್ಲಿರುತ್ತಾನೆ. ಮಗಳು ಮನೆಗೆ ಬಂದು ಅವಳ ಅತ್ತೆ, ಗಂಡನ ಬೇಡಿಕೆಯನ್ನು ಮುಂದಿಟ್ಟಾಗ ಅವನು ಇನ್ನೂ ಕುಗ್ಗಿ ಹೋಗುತ್ತಾನೆ. ತಂದೆಯ ಸಂಕಷ್ಟವನ್ನು ಅರಿತ ಪರಿಮಳ "ಎಷ್ಟೋ ಆಸೆಗಳೊಂದಿಗೂ ಕನಸುಗಳೊಂದಿಗೂ ಹಸೆಮಣೆ ಮೇಲೆ ಕುಳಿತವಳನ್ನು ವೈವಾಹಿಕ ಜೀವನ ಸಾಕು ಸಾಕು ಎಂದು ತಲ್ಲಣಿಸುವಷ್ಟು"(ಚೂಡಾಮಣಿ ೧೯೯೧ : ೫೩) ಗಂಡನ ಕಡೆಯವರು, ಗಂಡ ಎಲ್ಲರೂ ಮಾಡಿಬಿಡುತ್ತಾರೆ. ಅವಳು ಪುನಃ ಅಲ್ಲಿಗೆ ಹೋಗಲಾರೆ ಇಲ್ಲಿಯೇ ಇರುತ್ತೇನೆ ಎನ್ನುತ್ತಾಳೆ. ಸಮಾಜಕ್ಕೆ ಹೆದರುತ್ತಿದ್ದ ಆಕೆಯ ತಾಯಿ ತಂದೆಯರು ಅವರ ಬೇಡಿಕೆಯನ್ನು ಹೇಗಾದರೂ ಪೂರೈಸುವುದಾಗಿಯೂ ಅವಳು ಪುನಃ ಅಲ್ಲಿಯೇ ಹೋಗಿ ಬದುಕುವಂತೆಯೂ ಬುದ್ಧಿವಾದ ಹೇಳುತ್ತಾರೆ.

ತಾಯಿ ತಂದೆಯರ ಬುದ್ಧಿವಾದಗಳನ್ನು ಕೇಳಿದ ಪರಿಮಳ ಬಹಳ ದುಃಖಕ್ಕೀಡಾಗುತ್ತಾಳೆ. ಅಂದಿನ ರಾತ್ರಿ ತನ್ನ ತಂಗಿಯ ಬಳಿ "ಹೆಣ್ಣು ತನ್ನ ಸ್ವಾಭಿಮಾನವನ್ನು ಕಡಿಮೆ ಮಾಡಿಕೊಂಡಾದರೂ ಮದುವೆಯೆಂಬುದೊಂದನ್ನು ಮಾಡಿಕೊಳ್ಳಬೇಕೆಂದು ಏಕೆ ಯೋಚಿಸುತ್ತಾಳೆ? ರಕ್ಷಣೆ, ಸ್ನೇಹ ಇದರೊಂದಿಗೆ ದೇಹದ ಅಗತ್ಯವೂ ಒಂದು ಕಾರಣವಲ್ಲವೇ? ಒಂದು ಸಾಮಾನ್ಯವಾದ ಸಹಜವಾದ ಬಯೋಲಾಜಿಕಲ್ ಅಗತ್ಯಕ್ಕಾಗಿ ಜೀವನ ಪರ್ಯಂತ ಹೆಣಗಬೇಕು. ಅನಂತರ ಅದೇ ಹೆಣ್ಣಿಗೆ ಬಲಿಪೀಠವಾಗಿ ಪರಿವರ್ತನೆಯಾದರೆ....? ಅದೇನು ಅನ್ಯಾಯ?"(ಚೂಡಾಮಣಿ ೧೯೯೧ : ೫೪) ಎಂದು ವೈವಾಹಿಕ ಬದುಕೇ ಅವಳಿಗೆ ಬಂಧನವಾಗಿರುವ, ಮಾರಕವಾಗಿರುವ ನೆಲೆಯನ್ನು ಹೇಳುತ್ತಾಳೆ. ಮಾರನೆಯ ಬೆಳಗ್ಗೆ ಅವಳು ಅವರ ಮನೆಯ ಬಾವಿಯಲ್ಲಿ ಹೆಣವಾಗಿ ತೇಲಾಡುತ್ತಿರುತ್ತಾಳೆ. ಇದನ್ನು ಕಂಡ ಅವಳ ತಂಗಿ ಅಪಾರವಾದ ದುಃಖದ ಮಡುವಿನಲ್ಲಿ ಮುಳುಗಿ ಹೋಗುತ್ತಾಳೆ. ಅನ್ಯಾಯವಾದ ಅಕ್ಕನ ಸಾವಿನಿಂದ, ಇಂಥ ಅನುಭವಕ್ಕೆ ಒಳಗಾದ ಅವಳು ತನ್ನ ಬದುಕಿನ ನಿರ್ಣಯವನ್ನು ತಾನೇ ನಿರ್ಧರಿಸಿಕೊಳ್ಳುತ್ತಾಳೆ. ಮಹಿಳೆಯ ವೈವಾಹಿಕ ಬದುಕಿನಲ್ಲಿ ವರದಕ್ಷಿಣೆ ಆಕೆಗೆ ಉರುಳಾಗಿ ಪರಿಣಮಿಸುತ್ತದೆ. ಅಮಾಯಕ ಹೆಣ್ಣಿನ ಸಾವಿಗೆ ಹಣದ ಲೋಭತನವುಳ್ಳ ಗಂಡ ಹಾಗೂ ಅವನ ಕಡೆಯವರು ಒಂದು ಕಾರಣವಾದರೆ ಸಾಮಾಜಿಕ ಮೌಲ್ಯಗಳ ವ್ಯವಸ್ಥೆಯಡಿಯಲ್ಲಿ ಸಿಕ್ಕಿರುವ ತಾಯಿತಂದೆಯರು ಮತ್ತೊಂದು ಕಾರಣ. ಇಂಥ ಅನ್ಯಾಯವಾದ ಹೆಣ್ಣಿನ ಸಾವಿನ ಪ್ರಕರಣ ಮತ್ತೊಬ್ಬ ಹೆಣ್ಣಿಗೆ ಎಚ್ಚರಿಕೆಯನ್ನೂ ಮಾನಸಿಕ ದೃಢತೆಯನ್ನೂ ಛಲಗಾರಿಕೆಯನ್ನೂ ಹೆಚ್ಚಿಸುತ್ತದೆ ಎಂಬುದನ್ನು ಕಥೆ ನಿರೂಪಿಸುತ್ತದೆ.

ಮದುವೆಯಾದ ಗಂಡು ಜವಾಬ್ದಾರಿಯನ್ನು ತೊರೆದು ತನ್ನ ಪಾಡು ಅರಸಿಕೊಂಡು ಹೋಗಿಬಿಟ್ಟರೆ, ಆತನನ್ನು ನಂಬಿದ ಹೆಣ್ಣು ಹೇಗೆ ಬಾಳಬೇಕು ಎಂಬುದು ಸಮಸ್ಯೆಯಾಗುತ್ತದೆ. ವೈದೇಹಿಯವರ 'ಅಕ್ಕು' ಕತೆಯ ಅಕ್ಕು ಗಂಡನ ಇಂಥ ಸ್ಥಿತಿಯಿಂದ ಹುಚ್ಚಿಯಾಗುತ್ತಾಳೆ. ಅಕ್ಕುವನ್ನು ಮದುವೆಯಾದವನು ಸರಿಯಾಗಿ ಅವಳನ್ನು ಬಾಳಿಸದೆ ಸನ್ಯಾಸಿಯ ಹಿಂದೆ ಓಡಿಹೋಗುತ್ತಾನೆ. ಇಂಥ ಆಘಾತದಿಂದ ಅಕ್ಕುವಿಗೆ ಬಸಿರಾಗುವ, ಬಾಣಂತಿಯಾಗುವ, ತಾಯಿಯಾಗುವ ಹುಚ್ಚು ಹಿಡಿದುಕೊಳ್ಳುತ್ತದೆ. ಆಕೆ ಸಾಂಸಾರಿಕ ಸುಖ ಕಾಣದ ನತದೃಷ್ಟ ಹೆಣ್ಣು. ಸುಂದರವಾಗಿದ್ದ ತನ್ನನ್ನು ತೊರೆದು ಹೋದದ್ದು ಅವಳ ಮನಸ್ಸಿನಾಳದಲ್ಲಿ ಪೆಟ್ಟಾಗಿರಬೇಕು. ಮತ್ತೆ ಬಂದ ಅವನನ್ನು ತನ್ನ ಬಳಿ ಕೂಡಿಸಿಕೊಳ್ಳದೆ ಹೊಡೆದು ಅಟ್ಟಿಬಿಡುತ್ತಾಳೆ. ಅವಳ ಅಂಥ ಸ್ಥಿತಿಯನ್ನು ವಿರೋಧಿಸಿ ಬಡಿಯುವ ವಾಸು ಚಿಕ್ಕಪ್ಪಯ್ಯನಿಗೆ ತಮ್ಮಣ್ಣಯ್ಯನ ಹೆಂಡತಿಯೊಡನೆ ಇಟ್ಟುಕೊಂಡಿರಬಹುದಾದ ಅನೈತಿಕ ಸಂಬಂಧವನ್ನು ಅಕ್ಕು ಬಹಿರಂಗ ಪಡಿಸುತ್ತಾಳೆ. "ಆ ತಮ್ಮಣ್ಣಯನ್ ಹೆಂಡ್ತಿ ಕಾಯ್ತಿಲ್, ಕಾಣ್, ಓಡು ಓಡ್ ಬೇಗ, ಮರ್ಯಾದೆ ಸತವ್ನೆ, ಈಗ ಹೊಡಿ ಬಾ....ಕಾಂಬ"(ವೈದೇಹಿ ೧೯೮೪ : ೫೭) ಎಂಬ ಈ ಕೂಗು ಅವಳ ಸ್ವಾತಂತ್ರ್ಯವನ್ನು, ವಿಜಯದ ಸಂಕೇತವನ್ನು ಸೂಚಿಸುತ್ತದೆ.

ಅಕ್ಕುವಿನ ಹುಚ್ಚು ಪುರುಷ ಸಮಾಜದ ದಮನಕಾರಿ ಶಕ್ತಿಯನ್ನು ಪ್ರತಿಬಿಂಬಿಸುವ ರೂಪಕವಾಗಿ ಕಾಣಿಸುತ್ತದೆ. ಅವಳ ಹುಚ್ಚು ಸಾಂಕೇತಿಕ ಅರ್ಥಪಡೆದುಕೊಂಡು ಸಮಾಜದ ದಬ್ಬಾಳಿಕೆಯ ವಿರುದ್ಧದ ಬಂಡಾಯವಾಗಿ ಕಾಣುತ್ತದೆ. ಕಟ್ಟಿಕೊಂಡ ಗಂಡನಿಂದ ವಂಚನೆಗೊಳಗಾದ ಅಕ್ಕು ಉನ್ಮಾದದ ನೆಲೆಯನ್ನು ತಲುಪಿ, ಸಾಂಪ್ರದಾಯಿಕ ಕೌಟುಂಬಿಕ ಕ್ರೂರ ವ್ಯವಸ್ಥೆಯಡಿಯಲ್ಲಿ ನಡೆಯುವ ಶೋಷಣೆಯನ್ನು ಪ್ರತಿಭಟಿಸುತ್ತಾಳೆ. ವೈವಾಹಿಕ ಚೌಕಟ್ಟಿನಲ್ಲಿ ಪುರುಷರ ವಂಚನೆ, ಸಂಪ್ರದಾಯಕ ಕಟ್ಟುನಿಟ್ಟು ಸುಪ್ತತಳದ ಬಯಕೆಗಳು ಈ ಎಲ್ಲದರ ನಡುವೆ ಸಿಲುಕಿದ ಒಂದು ಹೆಣ್ಣಿನ ಮಾನಸಿಕ ಸ್ಥಿತಿಯನ್ನು ಕಥೆಗಾರ್ತಿ ಸೊಗಸಾಗಿ ಈ ಕಥೆಯಲ್ಲಿ ಚಿತ್ರಿಸಿದ್ದಾರೆ. ಹೆಣ್ಣಿನ ವೈವಾಹಿಕ ಬದುಕಿನಲ್ಲಿ ಘಟಿಸುವ ಇಂಥ ಸಮಸ್ಯೆಗಳು ಅವರದೇ 'ಭೂತ' ಮತ್ತು 'ಒಂದು ಅಪರಾಧದ ತನಿಖೆ' ಕಥೆಗಳಲ್ಲೂ ಮೂಡಿ ಬಂದಿವೆ.

ಆರ್. ಚೂಡಾಮಣಿಯವರ 'ಕಿಣರು(ಬಾವಿ)' ಕಥೆಯ ಪರಿಮಳ

ವರದಕ್ಷಿಣೆಯ ಸಮಸ್ಯೆಯಿಂದ ಪುರುಷ ವಂಚನೆಗೆ ಒಳಗಾಗುತ್ತಾಳೆ. ಪರಿಮಳಳಂತೆ ವೈದೇಹಿಯವರ 'ಅಕ್ಕು' ಮದುವೆಯಾಗಿದ್ದರೂ ದುಷ್ಟ ಗಂಡನನ್ನು ಪಡೆದು, ಯಾವ ಸಂಸಾರ ಸುಖವನ್ನು ಅನುಭವಿಸದೆ ಪುರುಷ ವಂಚನೆಗೆ ಗುರಿಯಾಗುತ್ತಾಳೆ. ಹೆಂಡತಿ ಕಡೆಯವರು ಕೊಟ್ಟಿದ್ದ ವರದಕ್ಷಿಣೆಯಿಂದ ತೃಪ್ತಿಹೊಂದದ ಗಂಡ ಪರಿಮಳಳನ್ನು ತವರು ಮನೆಗೆ ಕಳುಹಿಸುತ್ತಾನೆ. ಬಡತನ, ಸಂಸಾರದ ಹೊಣೆಯಲ್ಲಿ ವರದಕ್ಷಿಣೆ ಕೊಡಲಾಗದೆ ಒದ್ದಾಡುತ್ತಿರುವ ಆಕೆಯ ತಂದೆ, ವರದಕ್ಷಿಣೆಯನ್ನು ಆದಷ್ಟು ಬೇಗ ಸಂದಾಯ ಮಾಡುವವರೆಗೂ, ಅವಳು ಪುನಃ ಗಂಡನ ಮನೆಗೆ ಹೋಗಿ ಬದುಕಬೇಕೆಂದು ಒತ್ತಾಯ ಹೇರುತ್ತಾನೆ. ಗಂಡನ ಹಾಗೂ ತವರು ಮನೆಯ ಇಂಥ ಸ್ಥಿತಿಗೆ ನೊಂದು ಅವಳು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಮದುವೆಯಾದ 'ಅಕ್ಕು'ವಿನ ಗಂಡ ಬೇಜವಾಬ್ದಾರಿಯಿಂದ, ನಿರ್ಲಿಪ್ತತೆಯಿಂದ ಅವಳನ್ನು ಬಿಟ್ಟು ನಾಪತ್ತೆಯಾದಾಗ ಅಕ್ಕು ಉನ್ಮಾದ ಅವಸ್ಥೆಯನ್ನು ತಲುಪುತ್ತಾಳೆ. ಈ ಕಥೆಗಳಲ್ಲಿ ಕಾಣಿಸಿಕೊಳ್ಳುವ ಹೆಣ್ಣುಗಳಿಬ್ಬರೂ ಪುರುಷ ಪ್ರಧಾನ ವ್ಯವಸ್ಥೆಯ ವಂಚನೆಗೆ ಒಳಗಾದವರೆಂಬುದನ್ನು ಲೇಖಕಿಯರ ಇವೆರಡು ರಚನೆಗಳು ಅನಾವರಣಗೊಳಿಸುತ್ತವೆ.

ಹೆಣ್ಣು ಮಗು ತಾಯಿಯ ಹೊಟ್ಟೆಯಲ್ಲಿರುವಾಗಲೇ ತಾರತಮ್ಯಕ್ಕೆ ಒಳಗಾಗುತ್ತದೆ. ಮಗು ಹುಟ್ಟುವ ಮೊದಲೇ ಲಿಂಗ ಪರೀಕ್ಷೆಗೆ ಒಳಪಡಿಸಿ ಹೆಣ್ಣು ಮಗುವೆಂದು ತಿಳಿದು ಬಂದಾಗ ಅದನ್ನು ತಾಯಿಯ ಹೊಟ್ಟೆಯಲ್ಲಿಯೇ ಚಿವುಟುವ ಅಮಾನವೀಯತೆ ಸಮಾಜದಲ್ಲಿ ಜರುಗುತ್ತಿದೆ. ಆಧುನಿಕತೆ, ವೈಜ್ಞಾನಿಕ ಪ್ರಗತಿಗಳನ್ನು ಹೊಂದುತ್ತಿರುವ ಇಂದಿನ ದಿನಗಳಲ್ಲಿಯೂ ಇಂಥ ಅಮಾನವೀಯ ಕೃತ್ಯಗಳು ನಡೆಯುತ್ತಿರುವುದನ್ನು ಕಾಣಬಹುದು. ಇದು ಸ್ವಾತಂತ್ರ್ಯೋತ್ತರ ಕಾಲಘಟ್ಟದಿಂದ ಬೆಳೆದು ಬರುತ್ತಿರುವ ಅಮಾನುಷ ಪ್ಧತಿ.

ಹೀಗಾಗಿ, ಓರ್ವ ಮಹಿಳೆ ಗರ್ಭಧರಿಸಲು ಅವಳ ಗಂಡನ ಅಥವಾ ಮನೆಯವರ ಅನುಮತಿಗಾಗಿ ಕಾಯಬೇಕಿತ್ತು. ಹೆಣ್ಣಿನ ದೇಹದ ಮೇಲೆ ಗಂಡು ತನ್ನ ಸಂಪೂರ್ಣ ಹಿಡಿತವನ್ನು ಹೊಂದಿರುತ್ತಾನೆ. ಅವಳ ಗರ್ಭಾಶಯ ಪುರುಷನ ಸ್ವತ್ತೆಂಬಂತೆ, ಯಂತ್ರದಂತೆ ಬಳಕೆಗೊಳ್ಳುತ್ತಿದೆ. ಹೆಣ್ಣು ಭ್ರೂಣಹತ್ಯೆಗೆ ಕಾರಣವನ್ನು ಸಾಮಾಜಿಕ, ಸಾಂಸ್ಕೃತಿಕ ನಂಬಿಕೆಯ ಹಿನ್ನೆಲೆಯಲ್ಲಿ ಅರ್ಥೈಸಬೇಕಾಗುತ್ತದೆ. ಇಂಥ ಅಮಾನವೀಯ ಕೃತ್ಯಕ್ಕೆ ಪ್ರೇರೇಪಣೆ ನೀಡುವಂಥ ಕಾರಣಗಳೆಂದರೆ ಗಂಡು ಸಂತಾನದ ಹಂಬಲ, ವಂಶೋದ್ಧಾರಕ, ಕೊನೆಯ ಕಾಲದಲ್ಲಿ ತಂದೆ ತಾಯಿಯಂದಿರಿಗೆ ಆಶ್ರಯದಾತ ಮುಂತಾದವು ಒಂದು ಕಡೆಯಾದರೆ ಮತ್ತೊಂದೆಡೆ ವರದಕ್ಷಿಣೆಯ ಸಮಸ್ಯೆ. ಸಾರಾ ಅಬೂಬಕರ್ ಅವರ 'ವಿಜ್ಞಾನ ಭವಿಷ್ಯ ನುಡಿದಾಗ' ಎಂಬ ಕಥೆಯ ನಾಯಕಿ ಮಾಲಿನಿಯ ಗಂಡ ಮತ್ತು ಅತ್ತೆ ಇಬ್ಬರೂ ಗಂಡು ಸಂತಾನದ ಹಂಬಲವನ್ನು ಹೊಂದಿದ್ದರು.

ತಮಿಳಿನಲ್ಲಿ ಎಪ್ಪತ್ತರ ದಶಕದಿಂದ ಕಮ್ಯುನಿಸಂ, ಮಾರ್ಕ್ಸ್‌ವಾದಿಗಳ ಪ್ರಭಾವದಿಂದ ಸ್ತ್ರೀಪರವಾಗಿ, ಸ್ತ್ರೀವಾದಿ ನೆಲೆಯಲ್ಲಿ ಬರೆವಣಿಗೆಗೆ ತೊಡಗಿಸಿಕೊಂಡಿರುವ ರಾಜಮ್ ಕೃಷ್ಣನ್ ಅವರ 'ಪ್ಲಸ್ಸಾ? ಮೈನಸ್ಸಾ?' ಎಂಬ ಕಥೆ ಇದೇ ಬಗೆಯದು. ಕಥೆಯ ನಾಯಕಿ ಶಂಕರಿ ಎರಡು ಹೆಣ್ಣು ಮಕ್ಕಳ ತಾಯಿ. ಈಕೆ ಉದ್ಯೋಗಸ್ಥೆ. ಗಂಡನಿಗಿಂತ ಹೆಚ್ಚು ಸಂಬಳ ಪಡೆದು ಆರ್ಥಿಕವಾಗಿ ಸ್ವಾವಲಂಬಿ. ಅವಳು ಎರಡು ಹೆಣ್ಣು ಮಕ್ಕಳನ್ನು ಹಡೆದಿರುವುದು ಅವಳ ಗಂಡ ಶಿವ ಮತ್ತು ಅತ್ತೆ ಇಬ್ಬರಿಗೂ ತಾತ್ಸಾರವನ್ನುಂಟುಮಾಡುತ್ತದೆ. ಶಂಕರಿ ಮೂರನೇಯ ಬಾರಿ ಗರ್ಭಧರಿಸಿದಾಗ ಲಿಂಗ ಪರೀಕ್ಷೆ ಮಾಡಿ, ಹೆಣ್ಣಾದರೆ ಅದನ್ನು ತೆಗೆಸಬೇಕು ಅವರಿಬ್ಬರೂ ಅವಳ ಮೇಲೆ ಒತ್ತಾಯ ಹೇರುತ್ತಾರೆ. ಅವರು ಈ ರೀತಿ ಒತ್ತಾಯ ಮಾಡುವುದಕ್ಕೆ ಪ್ರಮುಖ ಕಾರಣವೆಂದರೆ, ವರದಕ್ಷಿಣೆಯ ಸಮಸ್ಯೆಯೆಂಬುದು ಸ್ಪಷ್ಟವಾಗುತ್ತದೆ.

ಹಣದ ದರ್ಪದಿಂಧ ಮೆರೆದಾಡುತ್ತಿರುವ ಹಣವಂತರ, ಊರ ಗೌಡರ, ಪಟೇಲರ ದೌರ್ಜನ್ಯಗಳಿಗೆ ಕೆಳವರ್ಗದ, ಬಡವರ ಹೆಣ್ಣು ಮಕ್ಕಳು ಒಳಗಾಗುತ್ತಿದ್ದಾರೆ. ಈ ರೀತಿ ಅತ್ಯಾಚಾರಕ್ಕೆ ಬಲಿಯಾದ ಹೆಣ್ಣುಗಳು ಮಾತ್ರ ಅಪರಾಧ ಭಾವದಿಂದ, ಯಾತನೆಯಿಂದ ಕಳಂಕ ಹೊತ್ತವರಾಗಿ ಸಮಾಜದಲ್ಲಿ ಬದುಕಬೇಕಾಗುತ್ತದೆ. ಸಮಾಜದ ಇಂಥ ಅನಾಹುತಕ್ಕೆ ಹೆಣ್ಣನ್ನೇ ಕಾರಣವಾಗಿಸುವ ಪ್ರಯತ್ನಗಳೇ ನಡೆಯುತ್ತವೆ. ಅವರ ನಡೆತೆಯನ್ನೇ ಮುಖ್ಯ ಕಾರಣವಾಗಿಸಿ, ಅದಕ್ಕೆ ಕಾರಣವಾದ ಪುರುಷರನ್ನು ದೋಷ ಮುಕ್ತವಾಗಿಸುವ, ತಪ್ಪಿಸಿಕೊಳ್ಳುವ ಪ್ರಯತ್ನಗಳು ಇಲ್ಲದಿಲ್ಲ. ಆದರೆ ಕೆಲವು ಸಂದರ್ಭಗಳಲ್ಲಿ ಇಂಥ ಅನ್ಯಾಯಕ್ಕೊಳಗಾದ ಹೆಣ್ಣಿನ ಪರವಾಗಿ ಇನ್ನಿತರ ಮಹಿಳೆಯರು ಹೋರಾಡುವುದುಂಟು. ಅನ್ಯಾಯಕ್ಕೆ ಕಾರಣರಾದವರನ್ನು ಕೊಲೆಗೈಯ್ಯಲೂ ಮುಂದಾಗುತ್ತಾರೆಂಬುದನ್ನು ಗಂಗಾಪಾದೇಕಲ್ ಅವರ 'ಭೇದ' ಹಾಗೂ ತಮಿಳಿನ ಆರ್. ಚೂಡಾಮಣಿಯವರ 'ಎನಕ್ಕುತ್ತೆರಿಯಾದು(ನನಗೆ ಗೊತ್ತಿಲ್ಲ)' ಎಂಬೆರಡು ಕಥಾನಕಗಳು ತೆರೆದಿಡುತ್ತವೆ.

ಮಹಿಳೆಯರು, ತಮ್ಮ ಪ್ರಾಣಕ್ಕೆ, ಶೀಲಕ್ಕೆ ಒದಗಿಬರುವ ಅಪಾಯಗಳನ್ನು; ತಮ್ಮ ಮೇಲೆ ಆಗುತ್ತಿರುವ ಅನ್ಯಾಯ, ದಬ್ಬಾಳಿಕೆ, ಶೋಷಣೆಗಳನ್ನು ಮೆಟ್ಟಿ ನಿಲ್ಲಬೇಕಾಗಿದೆ, ಎದುರಿಸಬೇಕಾಗಿದೆ ಎಂಬ ವಾಸ್ತವಾಂಶಗಳನ್ನು ಈ ಕಥೆಗಳೆರಡು ಅನಾವರಣ ಮಾಡುತ್ತವೆ. ತಮಗೆ ಒದಗಿ ಬರುವ ಅಪಾಯಗಳಿಂದ ಪಾರಾಗಲು ಇಂದು ಮಹಿಳೆಯರು ತೀವ್ರವಾಗಿ ಹೋರಾಡಬೇಕಾಗಿದೆ. ಪುರುಷ ದೌರ್ಬಲ್ಯ, ದೌರ್ಜನ್ಯಗಳಿಗೆ ಪೂರ್ಣ ವಿರಾಮ ಹಾಕಬೇಕಾಗಿದೆ ಎಂಬುದು ಕಥೆಗಾರ್ತಿಯರ ಪ್ರಯತ್ನವಾಗಿದೆ. ಹೀಗೆ ಕನ್ನಡ ಮತ್ತು ತಮಿಳು ಸಣ್ಣಕತೆಗಾರ್ತಿಯರ ಹಲವು ಕಥೆಗಳಲ್ಲಿ ಸ್ತ್ರೀವಾದಿ ಚಿಂತನೆಗಳಿರುವುದನ್ನು ಗಮನಿಸಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


೧. ವೈದೇಹಿ ೧೯೯೧ ಸಮಾಜ ಶಾಸ್ತ್ರಜ್ಞೆಯ ಟಿಪ್ಪಣಿಗೆ, ಅಕ್ಷರ ಪ್ರಕಾಶನ, ಸಾಗರ.

೨. ವೈದೇಹಿ ೧೯೮೪ ಅಂತರಂಗದ ಪುಟಗಳು, ಅಕ್ಷರ ಪ್ರಕಾಶನ, ಸಾಗರ.

೩. ಸಾರಾ ಅಬೂಬಕರ್ ೧೯೮೯ ಚಪ್ಪಲಿಗಳು, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೪. ಗಂಗಾಪಾದೇಕಲ್ ೧೯೫೫ ಜೂನ್ ತಿಂಗಳ ಮಯೂರದಲ್ಲಿ ಪ್ರಕಟವಾದ ಕಥೆ 'ಭೇದ'.

೫. ಚೂಡಾಮಣಿ ಆರ್ ೨೦೦೧ ಚೂಡಾಮಣಿ ಕಥೈಗಳ್, ರಾಜರಾಜನ್ ಪದಿಪ್ಪಗಂ, ಚೆನ್ನೈ.

೬. ಅಂಬೈ ೧೯೫೫ ವೀಟಿನ್ ಮೂಲೈಯಿಲ್ ಒರು ಸಮಯಲರೈ, ಕ್ರಿಯಾ, ಚೆನ್ನೈ.

೭. ರಾಜಂಕೃಷ್ಣನ್ ೧೯೭೨ ಅವಳ್, ತಾಗಂ ಪದಿಪ್ಪಗಂ, ಚೆನ್ನೈ.